# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **247** |
| **ಉತ್ತರಿಸಬೇಕಾದ ದಿನಾಂಕ** | : | **18-08-2026** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಸಹಕಾರ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿಕರು ಪಡೆದಿರುವ ಕೃಷಿ (ಬೆಳೆ) ಸಾಲದ ಒಟ್ಟು ಮೊತ್ತ ಎಷ್ಟು; | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಡಿಸಿಸಿ ಬ್ಯಾಂಕುಗಳಲ್ಲಿ ದಿನಾಂಕ:31-07-2026 ರ ಅಂತ್ಯಕ್ಕೆ 30,01,169 ರೈತರು ರೂ.25,180.77 ಕೋಟಿಗಳ ಬೆಳೆ ಸಾಲ ಪಡೆದು ಹೊರಬಾಕಿ ಹೊಂದಿರುತ್ತಾರೆ. |
| ಆ) | ಯಾವ ಜಿಲ್ಲೆಯ ರೈತರು ಅತಿ ಹೆಚ್ಚು ಹಾಗೂ ಅತಿ ಕಡಿಮೆ ಸಾಲ ಪಡೆದುಕೊಂಡಿದ್ದಾರೆ;<br>(ಜಿಲ್ಲಾವಾರು ರೈತರ ಸಂಖ್ಯೆ ಮತ್ತು ಪಡೆದ ಸಾಲದ ಒಟ್ಟು ಮೊತ್ತದ ವಿವರ ನೀಡುವುದು) | ಬೆಳಗಾವಿ ಜಿಲ್ಲೆಯ ರೈತರು ಅತಿ ಹೆಚ್ಚು ಅಂದರೆ 4,96,354 ರೈತರು ರೂ.3783.31 ಕೋಟಿಗಳ ಸಾಲ ಪಡೆದಿದ್ದು ಹಾಗೂ ಬೆಂಗಳೂರು ನಗರ ಜಿಲ್ಲೆಯ ರೈತರು ಅತಿ ಕಡಿಮೆ ಅಂದರೆ 10,123 ರೈತರು ರೂ.145.20 ಕೋಟಿಗಳ ಸಾಲ ಪಡೆದಿರುತ್ತಾರೆ.<br>ಜಿಲ್ಲಾವಾರು ರೈತರ ಸಂಖ್ಯೆ ಮತ್ತು ಪಡೆದ ಸಾಲದ ಒಟ್ಟು ಮೊತ್ತದ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಬೆಳೆ ಸಾಲ ಮತ್ತು ಅವಧಿ ಸಾಲ (ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ) ಪಡೆದಿರುವ ರೈತರ ಸಂಖ್ಯೆ ಮತ್ತು ಒಟ್ಟು ಮೊತ್ತ ಎಷ್ಟು; (ವಿವರವಾದ ಮಾಹಿತಿ ನೀಡುವುದು); | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಡಿಸಿಸಿ ಬ್ಯಾಂಕುಗಳು ಹಾಗೂ ಪಿಕಾರ್ಡ್ ಬ್ಯಾಂಕುಗಳಲ್ಲಿ ದಿನಾಂಕ:31-07-2026 ರ ಅಂತ್ಯಕ್ಕೆ 30,01,169 ರೈತರು ರೂ.25,180.77 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ಮತ್ತು 3,06,215 ರೈತರು ರೂ.5847.81 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಪಡೆದು ಹೊರಬಾಕಿ ಹೊಂದಿರುತ್ತಾರೆ.<br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |

ಈ) ಸಾಲ ವಸೂಲಾತಿಯಲ್ಲಿ ಇಳಿಮುಖವಾಗುತ್ತಿರುವುದು ನಿಜವೇ; ಆಗಿದ್ದಲ್ಲಿ, ಕಾರಣಗಳೇನು; ಇದರ ಪ್ರಮಾಣ ಎಷ್ಟಿದೆ; (ಶೇಕಡವಾರು ಮಾಹಿತಿಯೊಂದಿಗೆ ಸಂಪೂರ್ಣ ವಿವರ ನೀಡುವುದು);

2022-23ನೇ ಸಾಲಿನಿಂದ ದಿನಾಂಕ:31-07-2026 ರವರೆಗೆ ಕೃಷಿ ಸಾಲ ವಸೂಲಾತಿಯ ಶೇಕಡವಾರು ಪ್ರಮಾಣದ ವಿವರವನ್ನು ಕೆಳಕಂಡಂತೆ ನೀಡಲಾಗಿದೆ. 2023-24 ನೇ ಸಾಲಿನಲ್ಲಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸುಸ್ತಿ ಕೃಷಿ ಸಾಲಗಳ ಬಡ್ಡಿ ಮನ್ನಾ ಯೋಜನೆ ಜಾರಿಯಾದ ಪರಿಣಾಮವಾಗಿ ವಸೂಲಾತಿ ಉತ್ತಮವಾಗಿದ್ದು, ಉಳಿದ ಅವಧಿಯಲ್ಲಿ ಸಾಲ ವಸೂಲಾತಿ ಪ್ರಮಾಣ ಹೆಚ್ಚು-ಕಡಿಮೆ ಒಂದೇ ಪ್ರಮಾಣದಲ್ಲಿರುತ್ತದೆ. ಬಹಳ ಹಿಂದೆ ವಿತರಿಸಿದ ಸಾಲಗಳ ವಸೂಲಾತಿ ಕಡಿಮೆಯಾಗಿದ್ದು, 2026-27 ನೇ ಸಾಲಿನಲ್ಲಿ ಜುಲೈ-2026 ರವರೆಗೆ ವಸೂಲಾತಿಯಲ್ಲಿ ಚಾಲ್ತಿ ಕಂತಿನ ಸಾಲದ ಕಂತುಗಳ ವಸೂಲಾತಿ ಉತ್ತಮವಾಗಿರುತ್ತದೆ.

| ಸಾಲದ ವಿಧ | 2022-23 (ಶೇ) | 2023-24 (ಶೇ) | 2024-25 (ಶೇ) | 2025-26 (ಶೇ) | 2026-27 (ಜುಲೈ ವರೆಗೆ) | 2026-27 (ಜುಲೈ ವರೆಗೆ) |
|---|---|---|---|---|---|---|
| | | | | | ತಗಾದೆಗೆ (ಶೇ) | ಹೊರಬಾಕಿಗೆ (ಶೇ) |
| ಅಲ್ಪಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್) | 96.01 | 95.77 | 95.72 | 95.47 | 91.77 | 96.67 |
| ಮಧ್ಯಮಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್) | 89.29 | 96.73 | 89.74 | 87.23 | 81.14 | 96.87 |
| ದೀರ್ಘಾವಧಿ ಕೃಷಿ ಸಾಲ (ಕಸ್ಕಾರ್ಡ್ ಬ್ಯಾಂಕ್) | 58.54 | 74.46 | 68.88 | 73.36 | 4.02 | 85.41 |

ಉ) ಕೃಷಿ-ಬೆಳೆ ಸಾಲಕ್ಕೆ ಇರುವ ಬಡ್ಡಿ ಮತ್ತು ಸಹಾಯಧನದ ಪ್ರಮಾಣ ಎಷ್ಟು? (ವಿವರ ನೀಡುವುದು)

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪ್ಯಾಕ್ಸ್), ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಕಾರ್ಡ್) ಹಾಗೂ ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘ (ಲ್ಯಾಂಪ್ಸ್) ಗಳ ಮೂಲಕ ರೈತ ಸದಸ್ಯರು ಪ್ರತಿ ಬೆಳೆಗೆ ನಿಗದಿಯಾದ ಸ್ಕೇಲ್ ಆಫ್ ಫೈನಾನ್ಸ್ ಹಾಗೂ ಬೆಳೆ ವಿಮೆ ಪ್ರೀಮಿಯಂ ಮಿತಿಗೊಳಪಟ್ಟು ಪಡೆಯುವ ರೂ.5.00 ಲಕ್ಷಗಳವರೆಗಿನ ಬೆಳೆ ಸಾಲ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳ ಉದ್ದೇಶಕ್ಕಾಗಿ ಪಡೆಯುವ ರೂ.2.00 ಲಕ್ಷಗಳವರೆಗಿನ ಸಾಲ ಹೀಗೆ ಈ ಎರಡೂ ಉದ್ದೇಶಗಳಿಗೆ ಸೇರಿ ಗರಿಷ್ಟ ರೂ.5.00 ಲಕ್ಷಗಳವರೆಗೆ ಪಡೆಯುವ ಸಾಲವನ್ನು ಗರಿಷ್ಟ ಒಂದು ವರ್ಷದ ಅವಧಿಯೊಳಗಾಗಿ ಮರುಪಾವತಿಸಿದಲ್ಲಿ ಶೂನ್ಯ ಬಡ್ಡಿ ದರ ಅನ್ವಯವಾಗುತ್ತದೆ. ರೂ.5.00 ಲಕ್ಷಗಳಿಗಿಂತ ಹೆಚ್ಚಿನ ಸಾಲಗಳಿಗೆ ಸಹಕಾರ ಸಂಸ್ಥೆಗಳು ವಿಧಿಸುವ ಸಾಮಾನ್ಯ ಬಡ್ಡಿ ದರ ಅನ್ವಯವಾಗಲಿದೆ.

| | | |
|---|---|---|
| | | ನಿಗದಿತ ಅವಧಿಯಲ್ಲಿ ರೈತರು ಸಾಲ ಮರುವಾತಿಸಿದಲ್ಲಿ ರೈತರ ಪರವಾಗಿ ಸಹಕಾರ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಶೇ.6 ರ ಬಡ್ಡಿ ಸಹಾಯಧನವನ್ನು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ. ಇದರೊಂದಿಗೆ ಕೇಂದ್ರ ಸರ್ಕಾರದಿಂದ ಶೇ.3 ರ ಪ್ರೋತ್ಸಾಹ ಧನ ದೊರೆಯಲಿದೆ.<br><br>ಇದಲ್ಲದೇ ಸಹಕಾರ ಸಂಸ್ಥೆಗಳು ವಿತರಿಸುವ ಸಾಲದ ಪೈಕಿ ನಬಾರ್ಡ್ ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ಪಡೆದ ಸಾಲವನ್ನು ಹೊರತುಪಡಿಸಿ ಇತರೇ ಮೂಲಗಳಿಂದ ಭರಿಸಿದ ಬಂಡವಾಳಕ್ಕೆ ಕೇಂದ್ರ ಸರ್ಕಾರದಿಂದ ಶೇ.1.50 ರ ಬಡ್ಡಿ ಸಬ್‌ವೆನ್‌ಷನ್ ದೊರೆಯಲಿದೆ. |

**ಕಡತ ಸಂಖ್ಯೆ: ಸಿಒ 235 ಸಿಎಲ್‌ಎಸ್ 2026**

**(ಲಕ್ಷ್ಮಣ ಎಸ್. ಸವದಿ)**
ಸಹಕಾರ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು).ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 247 ಕ್ಕೆ ಅನುಬಂಧ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಡಿಸಿಸಿ ಬ್ಯಾಂಕುಗಳು ಹಾಗೂ ಪಿಕಾರ್ಡ್ ಬ್ಯಾಂಕುಗಳಲ್ಲಿ ದಿ.31-07-2026 ರೈತರು ಪಡೆದ ಕೃಷಿ ಸಾಲದ ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಜಿಲ್ಲೆಯ ಹೆಸರು | ಅಲ್ಪಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್/ಪ್ಯಾಕ್ಸ್) | | ಮಧ್ಯಮಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್/ಪ್ಯಾಕ್ಸ್) | | ದೀರ್ಘಾವಧಿ ಕೃಷಿ ಸಾಲ (ಪಿಕಾರ್ಡ್ ಬ್ಯಾಂಕ್) | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬೆಳಗಾವಿ | 496354 | 3783.31 | 1988 | 65.81 | 5072 | 103.96 |
| 2 | ವಿಜಯಪುರ | 251290 | 1966.77 | 5393 | 190.36 | 4162 | 104.41 |
| 3 | ಬಾಗಲಕೋಟೆ | 216588 | 1346.02 | 6439 | 212.99 | 4275 | 87.89 |
| 4 | ಧಾರವಾಡ | 28404 | 221.49 | 901 | 35.39 | 2663 | 42.97 |
| 5 | ಗದಗ | 44550 | 249.83 | 2607 | 105.10 | 1867 | 28.80 |
| 6 | ಹಾವೇರಿ | 29759 | 213.85 | 1656 | 54.76 | 3768 | 59.40 |
| 7 | ಉತ್ತರ ಕನ್ನಡ | 90170 | 1078.15 | 42220 | 774.77 | 14964 | 84.44 |
| 8 | ಬೀದರ | 151911 | 821.52 | 8470 | 51.22 | 1887 | 41.49 |
| 9 | ಕಲಬುರಗಿ | 145666 | 702.00 | 655 | 24.14 | 2051 | 33.12 |
| 10 | ಯಾದಗಿರ | 51205 | 220.99 | 36 | 1.72 | 1019 | 28.38 |
| 11 | ರಾಯಚೂರು | 66218 | 478.83 | 900 | 23.56 | 2177 | 28.98 |
| 12 | ಕೊಪ್ಪಳ | 38499 | 256.33 | 199 | 5.69 | 1605 | 29.55 |
| 13 | ಬಳ್ಳಾರಿ | 41278 | 400.87 | 1963 | 34.37 | 4353 | 77.66 |
| 14 | ವಿಜಯನಗರ | 76051 | 682.39 | 2091 | 36.60 | | |
| 15 | ಮೈಸೂರು | 96237 | 1009.29 | 3981 | 52.57 | 8098 | 82.25 |
| 16 | ಚಾಮರಾಜನಗರ | 38759 | 346.88 | 506 | 4.69 | 2650 | 24.75 |
| 17 | ಮಂಡ್ಯ | 151468 | 1091.73 | 3255 | 39.26 | 4603 | 57.49 |
| 18 | ಹಾಸನ | 179426 | 1260.17 | 3304 | 324.56 | 8535 | 73.03 |
| 19 | ಚಿಕ್ಕಮಗಳೂರು | 52075 | 749.95 | 29 | 0.73 | 14013 | 139.24 |
| 20 | ಕೊಡಗು | 30283 | 773.95 | 7259 | 208.27 | 3975 | 68.36 |
| 21 | ದಕ್ಷಿಣ ಕನ್ನಡ | 102383 | 1987.60 | 56882 | 1157.51 | 7344 | 63.88 |
| 22 | ಉಡುಪಿ | 44348 | 664.99 | 11851 | 191.88 | 2467 | 20.82 |
| 23 | ಬೆಂಗಳೂರು ನಗರ | 10123 | 145.20 | 42 | 1.95 | 512 | 15.36 |
| 24 | ಬೆಂಗಳೂರು ಗ್ರಾಮಾಂತರ | 31676 | 253.89 | 251 | 16.94 | 930 | 30.64 |
| 25 | ಬೆಂಗಳೂರು ದಕ್ಷಿಣ | 66516 | 487.06 | 589 | 37.50 | 1436 | 23.84 |
| 26 | ಕೋಲಾರ | 18921 | 234.39 | 1287 | 29.45 | 2010 | 42.13 |

| | | | | | | | |
|---|---|---|---|---|---|---|---|
| 27 | ಚಿಕ್ಕಬಳ್ಳಾಪುರ | 32970 | 407.22 | 162 | 8.90 | 3052 | 53.37 |
| 28 | ತುಮಕೂರು | 145086 | 738.23 | 1279 | 75.58 | 5744 | 76.67 |
| 29 | ಚಿತ್ರದುರ್ಗ | 64730 | 528.06 | 4434 | 142.59 | 2006 | 32.89 |
| 30 | ದಾವಣಗೆರೆ | 107214 | 921.55 | 1994 | 81.66 | 3457 | 64.56 |
| 31 | ಶಿವಮೊಗ್ಗ | 101011 | 1158.26 | 668 | 139.21 | 12229 | 97.75 |
| | ಒಟ್ಟು | **3001169** | **25180.77** | **173291** | **4129.73** | **132924** | **1718.08** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)

14/8/26